ಅಧ್ಯಕ್ಷರು.—ಫೆಬ್ರುವರಿ ತಿಂಗಳಲ್ಲಿ ಬರೀ ೨೮ ದಿವಸ ಇರುತ್ತದೆ. ಫೆಬ್ರುವರಿ ತಿಂಗಳಲ್ಲಿ ಮಂತ್ರಿ ಯಾಗಬೇಕೋ ಅಥವಾ ಏಪ್ರಿಲ್ ತಿಂಗಳಲ್ಲಿ ಮಂತ್ರಿ ಆಗಬೇಕೋ ?

ಶ್ರೀ ಪಾಟೀಲ್ ನಾಗರಾಜ್.—ನಾನು ಇದನ್ನು ಲಘುವಾಗಿ ಹೇಳುತ್ತಿಲ್ಲ, ಜೋಕ್ ಮಾಡುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಪಾಟೀಲ್ ನಾಗರಾಜ್‌ರವರೇ, ಮೊದಲು ಆ ಪಕ್ಷಕ್ಕೆ ಸೇರುತ್ತೇನೆಂದು ಅರ್ಜಿ ಹಾಕಿ. ನಂತರ ಮಂತ್ರಿ ಸ್ಥಾನಕ್ಕೆ ಕ್ಲೈಂ ಮಾಡಬಹುದು.

ಶ್ರೀ ಪಾಟೀಲ್ ನಾಗರಾಜ್.—ದೇಶದ ಪ್ರಧಾನಿಯವರು ಹೇಳುತ್ತಿದ್ದಾರೆ, ಸರ್ವ ಪಕ್ಷಗಳ ಮಂತ್ರಿಮಂಡಲವನ್ನು ಮಾಡಬೇಕೆಂದು. ನನ್ನೊಬ್ಬನನ್ನಾದರೂ ಪಕ್ಷ ರಹಿತವಾಗಿ ಅವರು ಒಂದು ತಿಂಗಳು ತೆಗೆದುಕೊಳ್ಳಲಿ ಒಂದು ತಿಂಗಳಿಗೆ ನೂರು ಕೋಟಿ ರೂಪಾಯಿಗಳನ್ನು ಕೊಡಲಿಲ್ಲವೆಂದರೆ ನಾನು ರಾಜೀನಾಮೆ ಕೊಡುತ್ತೇನೆ. ತಮ್ಮ ಮೂಲಕ ನಾನು ಈ ವಿಚಾರವನ್ನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ಮುಖ್ಯ ಮಂತ್ರಿಗಳು ನನ್ನ ಚಾಲೆಂಜ್ ಸ್ವೀಕಾರ ಮಾಡುವುದಾದರೆ, ನೂರು ಕೋಟಿ ರೂಪಾಯಿಗಳನ್ನು ಒಂದು ತಿಂಗಳಲ್ಲಿ ಕೊಡಲಿಲ್ಲವೆಂದರೆ ನಾನು ನನ್ನ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ.

(ಈ ಹಂತದಲ್ಲಿ ಬಿ.ಜೆ.ಪಿ.ಯ ಮಾನ್ಯ ಸದಸ್ಯರಾದ ಸರ್ವಶ್ರೀ **ಬಿ.** ಎಸ್. ಯಡಿಯೂರಪ್ಪ, ಕೆ.ಜಿ. ಈಶ್ವರಪ್ಪ, ನಾರಾಯಣರಾವ್ ಮನಹಳ್ಳಿ ಹಾಗೂ ರುದ್ರೇಪ್ಪ ಪೂಜಾರಿಯವರು ಸಭಾಧ್ಯಕ್ಷರ ಮುಂದಿನ ಅಂಗಣದಲ್ಲಿ ಧರಣಿ ಹೂಡಿದರು.)

ಅಧ್ಯಕ್ಷರು.—ನೀವು ಒಳಗೆ ಏಕೆ ಬಂದಿದ್ದೀರಿ ?

(ಶ್ರೀ ಬಿ. ಎಸ್. ಯಡಿಯೂರಪ್ಪನವರು ಧರಣಿ ಹೂಡಿದ್ದ ಸ್ಥಳದಲ್ಲೇ ಎದ್ದುನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡುವುದು ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ಅಧ್ಯಕ್ಷರು ಕರೆದ ಮೇಲೆ ಯಾರು ತಮ್ಮ ಸ್ಥಾನದಿಂದ ಮಾತನಾಡುವುದಿಲ್ಲ ಅವರು ಏನು ಹೇಳಿದರೂ ರೆಕಾರ್ಡಿನಲ್ಲಿ ದಾಖಲಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ (ತಮ್ಮ ಸ್ಥಾನಕ್ಕೆ ತೆರಳಿ ಮಾತನಾಡಿದರು).—ಸನ್ಮಾನ್ಯ ಅಧ್ಯಕ್ಷರೆ ಇವತ್ತು ಕೇಂದ್ರ ಸರ್ಕಾರ ರಾಜ್ಯದ ರೈತರಿಗೆ ದ್ರೋಹ ಮಾಡಿದೆ. ಅದನ್ನು ನಾವು ಪ್ರತಿ ಭಟಿಸುತ್ತೇವೆ. ರಾಜ್ಯಸರ್ಕಾರ ೧೯೯೬-೯೦ರ ಸಾಲವನ್ನು ಕೂಡ ಮನ್ನಾ ಮಾಡಬೇಕಾಗಿತ್ತು ಅದು ೬೦ ಕೋಟಿ ರೂಪಾಯಿಗಳಿಗಿಂತ ಏನು ಜಾಸ್ತಿ ಆಗುವುದಿಲ್ಲ. ಈ ಸರ್ಕಾರ ರೈತ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ ರೈತ ಪ್ರಮಾಣಿಕವಾಗಿ ಏನು ಸಾಲ ಕಟ್ಟುತ್ತಿದ್ದಾನೆ ಅವನು ಮುಂದೆ ಪ್ರಾಮಾಣಿಕವಾಗಿ ನಡೆದುಕೊಳ್ಳದಂತೆ ಒಂದು ವ್ಯವಸ್ಥೆ ರಾಜ್ಯ ಸರ್ಕಾರ ಮಾಡಿದಂತಾಗುತ್ತದೆ. ೧೭೬ ಕೋಟಿ ರೂಪಾಯಿಗಳಲ್ಲಿ ಮೊದಲ ಹತ್ತು ಸಾವಿರ ರೂಪಾಯಿಗಳನ್ನು ಮನ್ನಾ ಮಾಡಿದರೆ ೬೦-೬೫ ಕೋಟಿ ರೂಪಾಯಿಗಳನ್ನು ದಾಟುವುದಿಲ್ಲ. ಈಗಲೂ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಈ ರಾಜ್ಯದ ರೈತ ನಿಮ್ಮ ಪರವಾಗಿ ಇದ್ದಾನೆ. ನಿಮ್ಮನ್ನು ನಂಬಿದ್ದಾನೆ. ದೊಡ್ಡ ಮನಸ್ಸು ಮಾಡಿ ಉದಾರತೆಯಿಂದ ಅವನ ೧೯೯೬-೯೦ರ ರೈತರ ಸಾಲವನ್ನು ಕೂಡ ಮನ್ನಾ ಮಾಡಬೇಕೆಂದು ಮಾನ್ಯ ಸಭಾ ನಾಯಕರನ್ನು ಪ್ರಾರ್ಥಿಸುತ್ತೇನೆ. ಆಗ ಮಾತ್ರ ನ್ಯಾಯ ಸಿಕ್ಕಿದಂತಾಗುತ್ತದೆ. ಇಲ್ಲದಿದ್ದರೆ ನಿಜಕ್ಕೂ ದ್ರೋಹ ಮಾಡಿದಂತಾಗುತ್ತದೆ. ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ಧರಣಿ ಹೂಡುತ್ತೇವೆ.

(ಬಿಜೆಪಿಯ ಸದಸ್ಯರೆಲ್ಲ ಸದನದ ವೆಲ್‌ನೊಳಗೆ ಧರಣ ಹೂಡಿದರು.)

SRI M. MALLIKARJUNA KHARGE.—When the House is not in order the Hon. Member cannot speak on this occasion, because all his party members are sitting in the well of the House and the leader of BJP is speaking

MR. SPEAKER.—I seek the guidance of the Leader of House.

(Hon. Member Sri B.S. Yediyurappa once again came to the well of the House)